E-mail : academic.pg@kud.ac.in
Website: kud.ac.in
Academic (PG/Ph.D) Section

ಕರ್ನಾಟಕ ವಿಶ್ವವಿದ್ಯಾಲಯ,
ಪಾವಟೆನಗರ, ಧಾರವಾಡ –580003
KARNATAK UNIVERSITY,
Pavate Nagar, Dharwad-580 003
'A' Grade NAAC Accredited
University Potential for Excellence

Phone: (0836) 2215270

ನಂ.ಕೆಯು/ವಿಮಂ/ಪಿಎಚ್.ಡಿ/ಎಎಸ್‌ಓ/01/2023–24/69(9)  ದಿನಾಂಕ : 20-02-2024.

## ಅಧಿಸೂಚನೆ

ಸನ್ 2023–24ನೇ ಶೈಕ್ಷಣಿಕ ಸಾಲಿನ ಪಿಎಚ್.ಡಿ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಆಹ್ವಾನಿಸಲಾಗಿದೆ.

**ಪಿಎಚ್.ಡಿ ಕಾರ್ಯಸೂಚಿ ವಿಧಾನಗಳು:**

**ಅಭ್ಯರ್ಥಿಯು ಪೂರ್ಣಕಾಲಿಕ (Full time) ಅಥವಾ ಅರೆಕಾಲಿಕವಾಗಿ (Part time) ಪಿಎಚ್.ಡಿ ಕೋರ್ಸಿಗೆ ನೋಂದಣಿ ಮಾಡಿಸಬಹುದು.**

ಪೂರ್ಣಕಾಲಿಕ ಪಿಎಚ್.ಡಿ ಕೈಗೊಳ್ಳುವ ಅರ್ಹ ಅಭ್ಯರ್ಥಿಯು ಮಹಾಪ್ರಬಂಧವನ್ನು ಸಲ್ಲಿಸುವವರೆಗೂ ನಿಯಮಿತ ಹಾಜರಾತಿಯೊಂದಿಗೆ ವಿಭಾಗದಲ್ಲಿ ಅಧ್ಯಯನ ನಿರ್ವಹಿಸುವುದು.

ನಿಯಮಿತವಾಗಿ ವೃತ್ತಿನಿರತ/ಸೇವಾನಿರತ ಅಭ್ಯರ್ಥಿಗಳು ಅಂಶಕಾಲಿಕ/ಅರೆಕಾಲಿಕವಾಗಿ ಪಿಎಚ್.ಡಿ ಅಧ್ಯಯನ ಕೈಗೊಳ್ಳಬಹುದಾಗಿದೆ.

ಸಂಸ್ಥೆಯ ಪೂರ್ಣಕಾಲಿಕ ನೌಕರರು ಮಾತ್ರ ಪಿಎಚ್.ಡಿ ಸಂಶೋಧನೆಯನ್ನು ಅರೆಕಾಲಿಕವಾಗಿ ಕೈಗೊಳ್ಳಬಹುದಾಗಿದೆ. ಅಂತಹವರು ಈ ಕೆಳಗಿನ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು.

1. ಸೇವಾ ನಿರತ ಸಂಸ್ಥೆಯ ಮುಖ್ಯಸ್ಥರಿಂದ ನಿರಾಪೇಕ್ಷಣಾ ಪತ್ರ.
2. ಉದ್ಯೋಗದಾತರಿಂದ ಸೇವಾ ಪ್ರಮಾಣ ಪತ್ರ
3. ಪಿಎಚ್.ಡಿ ಪ್ರವೇಶಕ್ಕಾಗಿ ಆಯ್ಕೆಗೊಂಡು ನೋಂದಣಿ ಮಾಡಿಸುವಾಗ ಮುಚ್ಚಳಿಕೆ ಪ್ರಮಾಣ ಪತ್ರ.

'ಕ್ಯೂ.ಐ.ಪಿ' (QIP),'ಎಫ್.ಆಯ್.ಪಿ' (FIP) ಯೋಜನೆಯಡಿ ಪಿಎಚ್.ಡಿ ಕೈಗೊಳ್ಳುವ ಶಿಕ್ಷಕ ಅಭ್ಯರ್ಥಿಯು ತನ್ನ ಫೆಲೋಶಿಪ್ ಅವಧಿಯಲ್ಲಿ ಸಂಬಂಧಿಸಿದ ಸ್ನಾತಕೋತ್ತರ ಕೇಂದ್ರ/ಸಂಶೋಧನಾ ಕೇಂದ್ರದಲ್ಲಿ ನಿಯಮಿತವಾಗಿ ಕಾರ್ಯ ನಿರ್ವಹಿಸುವುದು. ಅಭ್ಯರ್ಥಿಯು ನಿಗದಿತ ನಮೂನೆಯಲ್ಲಿ ಭರ್ತಿಮಾಡಿದ ಅರ್ಜಿಯನ್ನು ಅವಶ್ಯಕ ದಾಖಲೆಗಳೊಂದಿಗೆ ಸಂಬಂಧಿಸಿದ ವಿಭಾಗದ ಅಧ್ಯಕ್ಷರಿಗೆ ದಿನಾಂಕ: **07.03.2024** ರೊಳಗಾಗಿ ಸಲ್ಲಿಸಬೇಕು.

**ನಿಯಮಾವಳಿಗಳು:**

**1.0 ಪ್ರವೇಶಾತಿ ಅರ್ಹತೆ:**

1.1 ಅಂಗೀಕೃತ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಟ 55% ಅಂಕಗಳನ್ನು ಪಡೆದ (ಪ.ಜಾ/ಪ.ಪಂ/ಪ್ರವರ್ಗ–1 ಹಾಗೂ ದಿವ್ಯಾಂಗ ಅಭ್ಯರ್ಥಿಗಳಿಗೆ 50%) ಯಾವುದೇ ಅಭ್ಯರ್ಥಿಯು (ರಾಯಭಾರ ಸಂಸ್ಥೆಯಿಂದ ಪ್ರಾಯೋಜಿತ ವಿದೇಶಿ ವಿದ್ಯಾರ್ಥಿಗಳು ಹಾಗೂ ಇನ್ನುಳಿದ ಪ್ರಾಯೋಜಿತ ವಿದ್ಯಾರ್ಥಿಗಳನ್ನೊಳಗೊಂಡು) ಪಿಎಚ್.ಡಿ ಪ್ರವೇಶಕ್ಕೆ ಅರ್ಜಿ ಸಲ್ಲಿಸಲು ಅರ್ಹನಾಗಿರುತ್ತಾನೆ/ಳೆ.

1.2 ಪ್ರಸ್ತುತ ಸೇವೆಯಲ್ಲಿ ನಿರತರಾಗಿದ್ದು 1992 ರ ಮಾರ್ಚ್ 31ಕ್ಕಿಂತ ಮೊದಲು ಸ್ನಾತಕೋತ್ತರ ಶಿಕ್ಷಕರಾಗಿ, ಗ್ರಂಥಪಾಲಕರಾಗಿ ಅಥವಾ ದೈಹಿಕ ಶಿಕ್ಷಕರಾಗಿ ನಿಯಮಿತ ಆಧಾರದ ಮೇಲೆ ನೇಮಕಗೊಂಡ ಮಹಾವಿದ್ಯಾಲಯ ಮತ್ತು ವಿಶ್ವವಿದ್ಯಾಲಯ ವಿಭಾಗಗಳ ಅಭ್ಯರ್ಥಿಗಳು ಕನಿಷ್ಠ 50% ಅಂಕಗಳನ್ನು ಪಡೆದಿರಬೇಕು.(ಪ.ಜಾ/ಪ.ಪಂ/ಪ್ರವರ್ಗ–1 ರ ಅಭ್ಯರ್ಥಿಗಳಿಗೆ ಕನಿಷ್ಠ 45% ಅಂಕಗಳು)

ಒಂದು ವೇಳೆ ಅಭ್ಯರ್ಥಿಯ ಸ್ನಾತಕೋತ್ತರ ಪದವಿಯ ಫಲಿತಾಂಶವು ಅಂಕಪಟ್ಟಿ ಅಥವಾ ಪ್ರತಿಲಿಪಿಗಳಲ್ಲಿ ಶ್ರೇಣಿ ಕ್ರೆಡಿಟ್ ಅಥವಾ ಸಂಚಿತ ಮೌಲ್ಯಾಂಕಗಳಲ್ಲಿ ನಮೂದಿತವಾಗಿದ್ದರೆ, ಅಂತಹವುಗಳನ್ನು ಶೇಕಡವಾರು ರೂಪಕ್ಕೆ ಪರಿವರ್ತಿಸಿ ಮೇಲಿನ ನಿಯಮಾವಳಿ 1.1 ಹಾಗೂ 1.2 ಗಳಲ್ಲಿ ಸೂಚಿಸಿದಂತೆ ಕನಿಷ್ಠ ವಿದ್ಯಾರ್ಹತೆಯನ್ನು ನಿರ್ಧರಿಸಲಾಗುವುದು.

**2.0 ಪ್ರವೇಶ ಪರೀಕ್ಷೆ**

2.1 ನಿಯಮಾವಳಿ 1.1 ಹಾಗೂ 1.2ರನ್ವಯ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇಕಡವಾರು ಅಂಕಗಳನ್ನು ಹೊಂದಿರುವ ಎಲ್ಲ ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಗೆ ಕುಳಿತುಕೊಳ್ಳಬಹುದಾಗಿದೆ.

2.2 ಆದಾಗ್ಯೂ (ಅ) ಸರ್ಕಾರದಿಂದ ಪ್ರಾಯೋಜಿತಗೊಂಡ ವಿದೇಶಿ ವಿದ್ಯಾರ್ಥಿಗಳು(ಬ) ಯು.ಜಿ.ಸಿ/ಯ.ಜಿ.ಸಿ. ಸಿಎಸ್.ಆಯ್.ಆರ್ ಜೆಆರ್ಎಫ್ಪರೀಕ್ಷೆ/ನೆಟ್/ಸ್ಲೆಟ್(ಕರ್ನಾಟಕ)ಗೇಟ್/ಜೆಆರ್ಇ/ಎಂ.ಫಿಲ್ (ಪ್ರವೇಶ ಪರೀಕ್ಷೆಯ ಮೂಲಕ) ತೇರ್ಗಡೆಯಾದವರಿಗೆ ಪ್ರವೇಶ ಪರೀಕ್ಷೆಯಿಂದ ವಿನಾಯತಿ ನೀಡಲಾಗುವುದು.

ಯು.ಜಿ.ಸಿ/ಯ.ಜಿ.ಸಿ.ಸಿಎಸ್.ಆಯ್.ಆರ್,ಜೆಆರ್ಎಫ್ಪರೀಕ್ಷೆ/ನೆಟ್/ಸ್ಲೆಟ್(ಕರ್ನಾಟಕ)ಗೇಟ್/ಜೆಆರ್ಇ/ಎಂ.ಫಿಲ್(ಪ್ರವೇಶ ಪರೀಕ್ಷೆಯ ಮೂಲಕ) ತೇರ್ಗಡೆಯಾದ ವಿದ್ಯಾರ್ಥಿಗಳು ಪ್ರವೇಶ ಪರೀಕ್ಷೆ ಬರೆಯಲು ಇಚ್ಛಿಸಿದಲ್ಲಿ ನಿಗದಿತ ಶುಲ್ಕವನ್ನು ಭರಿಸುವುದರೊಂದಿಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಬಹುದು.

2.3 **ಪ್ರವೇಶ ಪರೀಕ್ಷೆಗಳಿಗೆ ಗರಿಷ್ಠ ಅಂಕಗಳು :** 100 ಅಂಕಗಳು

2.4 **ಪ್ರಶ್ನೆಗಳ ನಮೂನೆ :** ಬಹು ಆಯ್ಕೆ ಪ್ರಶ್ನೆಗಳು (MCQ)

2.5 **ಪ್ರವೇಶ ಪರೀಕ್ಷೆಯ ಪಠ್ಯಕ್ರಮ :** ಸ್ನಾತಕೋತ್ತರ ವಿಭಾಗಗಳ ರಿಸರ್ಚ್ ಮೆಥಡಾಲಾಜಿ ಮತ್ತು ಕಾಗ್ನೇಟ್ ವಿಷಯ/ಕೋರ್ ವಿಷಯಗಳ ಪ್ರವೇಶ ಪರೀಕ್ಷೆ ನಡೆಸುವ ಪಠ್ಯಕ್ರಮ.

2.6 **ಪ್ರಶ್ನೆಗಳ ಸಂಖ್ಯೆ:** ಪ್ರಶ್ನೆ ಪತ್ರಿಕೆಯಲ್ಲಿ ನೂರು ಪ್ರಶ್ನೆಗಳಿದ್ದು ಶೇಕಡಾ 50 ರಷ್ಟು ಪ್ರಶ್ನೆಗಳು ಸಂಶೋಧನಾ ವಿಧಾನಕ್ಕೆ ಮೀಸಲಾದರೆ, ಉಳಿದ 50ರಷ್ಟು ಪ್ರಶ್ನೆಗಳು ಜ್ಞಾತಿ ಮತ್ತು ಮೂಲ ವಿಷಯಕ್ಕೆ ಸಂಬಂಧಿಸಿದ್ದು ವಿಭಾಗೀಯ ಮಂಡಳಿಯು ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸುತ್ತದೆ.

2.7 'ಸಂಶೋಧನಾ ವಿಧಾನ'ದ 50 ಪ್ರಶ್ನೆಗಳು ದತ್ತ ವ್ಯಾಖ್ಯಾನ, ಭಾಷಾಗ್ರಹಿಕೆ ಮತ್ತು ತಾರ್ಕಿಕ ಪರೀಕ್ಷೆಗಳನ್ನು ಒಳಗೊಂಡರೆ ಇನ್ನುಳಿದ 50 ಪ್ರಶ್ನೆಗಳಿಗೆ ಜ್ಞಾತಿ ಅಥವಾ ಮೂಲ ವಿಷಯಗಳ ಪ್ರಸ್ತುತ ಸ್ನಾತಕೋತ್ತರ ಪಠ್ಯಕ್ರಮ ಆಧಾರವಾಗಿರುತ್ತದೆ.

2.8 **ಪ್ರವೇಶ ಪರೀಕ್ಷೆಯ ಅವಧಿ :** 120 ನಿಮಿಷಗಳು

2.9 **ಪ್ರವೇಶ ಪರೀಕ್ಷೆ ನಡೆಸುವ ಸ್ಥಳ :** ಪರೀಕ್ಷಾ ವಿಭಾಗ ಮತ್ತು ಡಾ. ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ, ಕ.ವಿ.ವಿ ಧಾರವಾಡ.

**3.0 ಅಭ್ಯರ್ಥಿಗಳ ಅರ್ಹತಾ ಯಾದಿ ತಯಾರಿಕೆ :**

3.1 ಸರಕಾರಿ ಪ್ರಾಯೋಜಿತ ವಿದೇಶಿ ವಿದ್ಯಾರ್ಥಿಗಳು, ಯು.ಜಿ.ಸಿ/ಯ.ಜಿ.ಸಿ.–ಸಿಎಸ್.ಆಯ್.ಆರ್, ಜೆಆರ್ಎಫ್ ಪರೀಕ್ಷೆ/ನೆಟ್/ಸ್ಲೆಟ್ (ಕರ್ನಾಟಕ) ಗೇಟ್/ಜೆಆರ್ಇ/ಎಂ.ಫಿಲ್ (ಪ್ರವೇಶ ಪರೀಕ್ಷೆಯ ಮೂಲಕ ಪ್ರವೇಶ ಪಡೆದ) ಗಳಲ್ಲಿ ತೇರ್ಗಡೆಯಾದವರನ್ನು ಅವರು ಆಯಾ ಸ್ನಾತಕೋತ್ತರ ಪದವಿಗಳಲ್ಲಿ ಗಳಿಸಿದ ಅಂಕಗಳನ್ನು ಆಧರಿಸಿ ಕ್ರೋಡಿಕೃತ ಅರ್ಹತಾ ಯಾದಿಯಲ್ಲಿ ಮೊದಲು ತೋರಿಸುವುದು.

3.2 ಪ್ರವೇಶ ಪರೀಕ್ಷೆಯ ನಂತರ 50:50 ರ ಅನುಪಾತದಲ್ಲಿ ಅಭ್ಯರ್ಥಿಯ ಸ್ನಾತಕೋತ್ತರ ಪದವಿಯ ಅಂಕ ಹಾಗೂ ಪ್ರವೇಶ ಪರೀಕ್ಷೆಯ ಅಂಕಗಳನ್ನು ಆಧರಿಸಿ ಅರ್ಹತಾ ಯಾದಿಯನ್ನು ಸಿದ್ಧಪಡಿಸಲಾಗುವುದು. ಆದಾಗ್ಯೂ ಅಭ್ಯರ್ಥಿಯು ಅರ್ಹತಾ ಪ್ರವೇಶ ಪರೀಕ್ಷೆಯಲ್ಲಿ ಕನಿಷ್ಠ 50% (ಪ.ಜಾ/ಪ.ಪಂ/ಪ್ರವರ್ಗ–1 ಹಾಗೂ ದಿವ್ಯಾಂಗ ಅಭ್ಯರ್ಥಿಗಳಿಗೆ 45%) ಅಂಕಗಳನ್ನು ಗಳಿಸಬೇಕಾಗುತ್ತದೆ.

3.3 ಅರ್ಹತಾ ಯಾದಿಯಲ್ಲಿರುವ ಅಭ್ಯರ್ಥಿಗಳನ್ನು ಪ್ರಸ್ತುತ ಖಾಲಿ ಇರುವ ಘೋಷಿತ ಸ್ಥಾನಗಳಿಗೆ ಮಾತ್ರ ಪರಿಗಣಿಸಲಾಗುವುದು.

ಅರ್ಹತಾ ಯಾದಿಯಲ್ಲಿರುವ ಅಭ್ಯರ್ಥಿಗಳು ಸಂಬಂಧಿಸಿದ ಸ್ನಾತಕೋತ್ತರ ವಿಭಾಗಗಳು ನಡೆಸುವ ಸಂದರ್ಶನಕ್ಕೆ ಕಡ್ಡಾಯವಾಗಿ ಹಾಜರಾಗುವುದು. ಸಂದರ್ಶನಕ್ಕೆ ಸಿಗುವ ಅರ್ಹತೆಯು ಪಿಎಚ್.ಡಿ ನೋಂದಣಿಯ ದೃಢೀಕರಣಕ್ಕೆ ಮಾನದಂಡವಾಗಿರುವುದಿಲ್ಲ.

3.5 ಪ್ರವೇಶಕ್ಕೆ ಆಯ್ಕೆಗೊಂಡ ವಿದ್ಯಾರ್ಥಿಗಳ ಆಯ್ಕೆ ಪಟ್ಟಿಯನ್ನು ಸಂಬಂಧಿಸಿದ ವಿಭಾಗದವರು ನೋಟಿಸ್ ಬೋರ್ಡನಲ್ಲಿ ಪ್ರಕಟಿಸಬೇಕು. ಆಯ್ಕೆಗೊಂಡ ವಿದ್ಯಾರ್ಥಿಗಳು 7 ಕರ್ತವ್ಯದ ದಿನಗಳೊಳಗಾಗಿ ನಿಗದಿತ ಶುಲ್ಕ ಭರಿಸಬೇಕು.

3.6 ಪ್ರವೇಶಕ್ಕಾಗಿ ಕಾಯ್ದಿರಿಸಿದ ವಿದ್ಯಾರ್ಥಿಗಳ ಪ್ರವೇಶಾತಿ ಯಾದಿಯನ್ನು ಪ್ರಕಟಿಸಬೇಕು.

**4.0 ಕೋರ್ಸ್‌ವರ್ಕ್: (ನಾಲ್ಕು ಪತ್ರಿಕೆಗಳು) (16 ವಾರಗಳು, ಪೂರ್ಣಕಾಲಿಕ ಮತ್ತು ಅರೆಕಾಲಿಕ ವಿದ್ಯಾರ್ಥಿಗಳಿಗೆ)**

**4.1** ಪಿಎಚ್.ಡಿ ನೋಂದಣಿ ಮಾಡಿಸಿದ ಪೂರ್ಣಕಾಲಿಕ ಮತ್ತು ಅರೆಕಾಲಿಕ ಅಭ್ಯರ್ಥಿಗಳು ತಾತ್ಕಾಲಿಕ ನೋಂದಣಿಯ ದಿನಾಂಕದಿಂದ ಒಂದು ವರ್ಷದ ಒಳಗೆ ಸಂಬಂಧಿಸಿದ ವಿಭಾಗದಲ್ಲಿ 16 ವಾರಗಳ ಒಂದು ಸೆಮಿಸ್ಟರನ ಕೋರ್ಸ್‌ವರ್ಕ್‌ನ್ನು ಕೈಗೊಳ್ಳಬೇಕಾಗಿದ್ದು, ತಪ್ಪಿದಲ್ಲಿ ಅವನ/ಅವಳ ನೋಂದಣಿಯನ್ನು ರದ್ದುಪಡಿಸಲಾಗುತ್ತದೆ. ಅವಶ್ಯಕವಿದ್ದಲ್ಲಿ, ಡಾಕ್ಟರಲ್ ಅಭ್ಯರ್ಥಿಗಳು ಕೋರ್ಸ್‌ವರ್ಕ್‌ನ್ನು ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಸಹೋದರ ವಿಭಾಗಗಳು, ಸಂಸ್ಥೆಗಳು ಅಥವಾ ಸಂಶೋಧನಾ ಕೇಂದ್ರಗಳಲ್ಲಿ ಕೈಗೊಳ್ಳಬಹುದಾಗಿದ್ದು ಅದನ್ನೂ ಸಹ ಪರಿಗಣಿಸಲಾಗುವುದು. ಕೋರ್ಸವರ್ಕ ಕಡ್ಡಾಯವಾಗಿರುತ್ತದೆ.

**4.2** ಪಿಎಚ್.ಡಿ ಕೋರ್ಸ್‌ವರ್ಕ್ 04 ಪತ್ರಿಕೆಗಳನ್ನು ಒಳಗೊಂಡಿದ್ದು, ಕೋರ್ಸ–1: ಸಂಶೋಧನಾ ವಿಧಾನ, ಕೋರ್ಸ –2: ಜ್ಞಾತಿ/ಮೂಲ ವಿಷಯಗಳು ಹಾಗೂ ಕೋರ್ಸ–3: ಸಂಶೋಧನಾ ಕ್ಷೇತ್ರ, ಮತ್ತು ಕೋರ್ಸ–4: ಸಂಶೋಧನೆ ಮತ್ತು ಪ್ರಕಟಣೆ ನೀತಿ ಶಾಸ್ತ್ರ ಹೀಗೆ ಮೊದಲ 3 ಪ್ರತಿ ಪತ್ರಿಕೆಗಳಿಗೆ 100 ಅಂಕಗಳಂತೆ ಹಾಗೂ 4ನೇಯ ಪತ್ರಿಕೆಗೆ 50 ಅಂಕಗಳಂತೆ ನಾಲ್ಕು ಪತ್ರಿಕೆಗಳಿರುತ್ತವೆ. 50 ಅಂಕಗಳು ಮೌಖಿಕ ಪರೀಕ್ಷೆಗೆ ಮೀಸಲಾಗಿರುತ್ತದೆ. ಕೋರ್ಸ್ 1 ಮತ್ತು 2 ಎಲ್ಲ ವಿಭಾಗಗಳ ಎಲ್ಲ ವಿಷಯಗಳಿಗೆ ಸಾಮಾನ್ಯವಾಗಿರುವ ಪತ್ರಿಕೆಗಳಾಗಿವೆ. ಕೋರ್ಸ್ 4 ಪತ್ರಿಕೆಯು ಎಲ್ಲ ನಿಖಾಯದವರಿಗೆ ಅನ್ವಯಿಸುವ ಪತ್ರಿಕೆಯಾಗಿದೆ.

**5.0 ಖಾಲಿ ಇರುವ ಸ್ಥಾನಗಳ ಯಾದಿ :**
**ವಿವಿಧ ವಿಭಾಗಗಳಲ್ಲಿ ಖಾಲಿ ಇರುವ ಸ್ಥಾನಗಳು ಈ ಕೆಳಗಿನಂತಿವೆ.**

**5.1 ಕಲಾ ನಿಖಾಯ:**

| ಕ್ರಸಂ | ವಿಭಾಗಗಳು | ಖಾಲಿ ಇರುವ ಸ್ಥಾನಗಳು |
|---|---|---|
| 1. | ಇಂಗ್ಲೀಷ | 12 |
| 2. | ಜಾನಪದ | -- |
| 3. | ವಿದೇಶಿ ಭಾಷಾ ಅಧ್ಯಯನ | -- |
| 4. | ಹಿಂದಿ | 03 |
| 5. | ಕನ್ನಡ | 09 |
| 6. | ಭಾಷಾವಿಜ್ಞಾನ | -- |
| 7. | ಮರಾಠಿ | 02 |
| 8. | ಸಂಗೀತ ಮತ್ತು ದೃಶ್ಯ ಕಲೆ | 02 |
| 9. | ಸಂಸ್ಕೃತ | 03 |
| 10. | ಉರ್ದು ಮತ್ತು ಪರ್ಷಿಯನ್ | 07 |
| ಒಟ್ಟು | | **38** |

**5.2 ವಾಣಿಜ್ಯಶಾಸ್ತ್ರ ನಿಖಾಯ:**

| ಕ್ರಸಂ | ವಿಭಾಗಗಳು | ಖಾಲಿ ಇರುವ ಸ್ಥಾನಗಳು |
|---|---|---|
| **1.** | ವಾಣಿಜ್ಯಶಾಸ್ತ್ರ | 17 |
| ಒಟ್ಟು | | **17** |

5.3 ಶಿಕ್ಷಣ ನಿಖಾಯ :

| ಕ್ರಸಂ | ವಿಭಾಗಗಳು | ಖಾಲಿ ಇರುವ ಸ್ಥಾನಗಳು |
|---|---|---|
| 1. | ಶಿಕ್ಷಣ | 06 |
| 2. | ದೈಹಿಕ ಶಿಕ್ಷಣ | -- |
| | ಒಟ್ಟು | **06** |

5.4 ನಿರ್ವಹಣೆ ನಿಖಾಯ :

| ಕ್ರಸಂ | ವಿಭಾಗಗಳು | ಖಾಲಿ ಇರುವ ಸ್ಥಾನಗಳು |
|---|---|---|
| 1. | ನಿರ್ವಹಣೆ ಅಧ್ಯಯನ | 08 |
| | ಒಟ್ಟು | **08** |

5.5 ಕಾನೂನು ನಿಖಾಯ:

| ಕ್ರಸಂ | ವಿಭಾಗಗಳು | ಖಾಲಿ ಇರುವ ಸ್ಥಾನಗಳು |
|---|---|---|
| 1. | ಕಾನೂನು | -- |
| | ಒಟ್ಟು | -- |

5.6 ಸಮಾಜ ವಿಜ್ಞಾನ ನಿಖಾಯ:

| ಕ್ರಸಂ | ವಿಭಾಗಗಳು | ಖಾಲಿ ಇರುವ ಸ್ಥಾನಗಳು |
|---|---|---|
| 1. | ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನ ವಿಜ್ಞಾನ | -- |
| 2. | ಮಾನವಶಾಸ್ತ್ರ | 02 |
| 3. | ಅಪರಾಧಶಾಸ್ತ್ರ ಮತ್ತು ನ್ಯಾಯವಿಜ್ಞಾನ | 02 |
| 4. | ಅರ್ಥಶಾಸ್ತ್ರ | 07 |
| 5. | ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ | 06 |
| 6. | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ | -- |
| 7. | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ | -- |
| 8. | ತತ್ವಶಾಸ್ತ್ರ | 09 |
| 9. | ಮನೋವಿಜ್ಞಾನ | 06 |
| 10. | ರಾಜ್ಯಶಾಸ್ತ್ರ | -- |
| 11. | ಸಮಾಜ ಕಾರ್ಯ | -- |
| 12. | ಸಮಾಜಶಾಸ್ತ್ರ | 09 |
| | ಒಟ್ಟು | **41** |

5.7 ವಿಜ್ಞಾನ ಮತ್ತು ತಂತ್ರಜ್ಞಾನ ನಿಖಾಯ :

| ಕ್ರ.ಸಂ | ವಿಭಾಗಗಳು | ಖಾಲಿ ಇರುವ ಸ್ಥಾನಗಳು |
|---|---|---|
| 1. | ಅನ್ವಯಿಕ ಅನುವಂಶಶಾಸ್ತ್ರ | 01 |
| 2. | ಸಸ್ಯಶಾಸ್ತ್ರ | 12 |
| 3. | ಜೀವರಸಾಯನಶಾಸ್ತ್ರ | 08 |
| 4. | ಜೈವಿಕ ತಂತ್ರಜ್ಞಾನ ಮತ್ತು ಸೂಕ್ಷ್ಮಜೀವಶಾಸ್ತ್ರ | 07 |
| 5. | ರಸಾಯನಶಾಸ್ತ್ರ | 24 |
| 6. | ಗಣಕವಿಜ್ಞಾನ | 06 |
| 7. | ಭೂಗೋಳಶಾಸ್ತ್ರ | 07 |
| 8. | ಭೂಗರ್ಭಶಾಸ್ತ್ರ | 13 |
| 9. | ಗಣಿತಶಾಸ್ತ್ರ | 14 |
| 10. | ಕಡಲಜೀವಶಾಸ್ತ್ರ, ಸ್ನಾತಕೋತ್ತರ ಕೇಂದ್ರ, ಕಾರವಾರ | 03 |
| 11. | ಭೌತಶಾಸ್ತ್ರ | 07 |
| 12. | ಸಂಖ್ಯಾಶಾಸ್ತ್ರ | 13 |
| 13. | ಪ್ರಾಣಿಶಾಸ್ತ್ರ | 07 |
| | ಒಟ್ಟು | **122** |

**6.0** ಅರ್ಜಿ ಸಲ್ಲಿಸಲು ಹಾಗೂ ಶುಲ್ಕ ತುಂಬಲು ಸೂಚನೆಗಳು :

**6.1** **ಅರ್ಜಿ ನಮೂನೆಯನ್ನು ವಿಶ್ವವಿದ್ಯಾಲಯದ ಜಾಲತಾಣ www.kud.ac.in ದಿಂದ ಡೌನಲೋಡ್ ಮಾಡಿಕೊಂಡು ನಿಗದಿತ ಎಲ್ಲ ದಾಖಲೆಗಳ ಅಡಕಗಳೊಂದಿಗೆ (ಆನ್‌ಲೈನ್ ಮೂಲಕ ಭರಿಸಿದ ಅರ್ಜಿ ಪ್ರಕ್ರಿಯೆ ಶುಲ್ಕದ ರಸೀದಿ/ಚಲನ್ ಪ್ರತಿಯೊಂದಿಗೆ) ಸರಿಯಾಗಿ ತುಂಬಿದ ಅರ್ಜಿಗಳನ್ನು ಕರ್ನಾಟಕ ವಿಶ್ವವಿದ್ಯಾಲಯದ ಸಂಬಂಧಿಸಿದ ಸ್ನಾತಕೋತ್ತರ ವಿಭಾಗದ ಅಧ್ಯಕ್ಷರಿಗೆ ಸಲ್ಲಿಸುವುದು.**

**6.2** **ಶುಲ್ಕದ ವಿವರ ಈ ಕೆಳಗಿನಂತಿದೆ.**

ಅ. ಅರ್ಜಿ ಶುಲ್ಕ ರೂ. **2,420/– (ರೂ. 1,210/–** (ಪ.ಜಾ/ಪ.ಪಂ/ಪ್ರವರ್ಗ–1 ನಿಯಮಿತ ವಿದ್ಯಾರ್ಥಿಗಳಿಗೆ ಮಾತ್ರ)

ಬ. ಅರ್ಜಿ ಶುಲ್ಕ ರೂ. **4,840/–** ವಿದೇಶಿ ವಿದ್ಯಾರ್ಥಿಗಳಿಗೆ.

ಹೆಚ್ಚಿನ ವಿವರಗಳಿಗಾಗಿ www.kud.ac.in Online Payment ನಲ್ಲಿ ಭೇಟಿ ನೀಡುವುದು. ಎಸ್‌ಬಿಐ ಕಲೆಕ್ಟನಲ್ಲಿ ಆನ್‌ಲೈನ್ ಮೂಲಕ ಶುಲ್ಕವನ್ನು ಪಾವತಿಸಲು ವಿದ್ಯಾರ್ಥಿಗಳಿಗೆ ಈ ಮೂಲಕ ತಿಳಿಸಲಾಗಿದೆ.

**ಒಮ್ಮೆ ಭರಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕಾಗಿ ಮರಳಿಸಲಾಗುವುದಿಲ್ಲ.**

**6.3** ರೋಸ್ಟರ್ ವಿಷಯವಾಗಿ ಸುತ್ತೋಲೆ ಸಂಖ್ಯೆ :ಕೆಯು/ವಿಮಂ/ಪಿಜಿ/ಪಿಎಚ್.ಡಿ/ಎಎಸ್‌ಒ/2022–23/ 84 ದಿನಾಂಕ: 25.03.2023 ನೋಡಬಹುದಾಗಿದೆ.

**7.0** **ಜಾತಿ ಪ್ರಮಾಣ ಪತ್ರ ಮತ್ತು ಶುಲ್ಕ ವಿನಾಯಿತಿ :**

**ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಓಬಿಸಿ ವಿದ್ಯಾರ್ಥಿಗಳು ತಹಶೀಲದಾರ/ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದಂತಹ ಜಾತಿ ಪ್ರಮಾಣ ಪತ್ರ ಸಲ್ಲಿಸಬೇಕು. ಆದರೆ, 05 ವರ್ಷಗಳೊಳಗೆ ಪಡೆದಿರುವಂತಹ ಆದಾಯ ಪ್ರಮಾಣ ಪತ್ರ ಸಲ್ಲಿಸಬೇಕು.**

**ಪೂರಕ ದಾಖಲೆಗಳಿಲ್ಲದ ಮತ್ತು ಅಪೂರ್ಣವಾದ ಅರ್ಜಿಗಳನ್ನು ಪರಿಗಣಿಸದೆ ತಿರಸ್ಕರಿಸಲಾಗುವುದು.**

**ಅನ್ಯ ವಿಶ್ವವಿದ್ಯಾಲಯಗಳ ಅಭ್ಯರ್ಥಿಗಳು ಆಯ್ಕೆಯಾದಲ್ಲಿ ಪ್ರವೇಶಾತಿ ಸಂದರ್ಭದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ವಿದ್ಯಾಮಂಡಳ ವಿಭಾಗದಿಂದ ನಿಗದಿತ ದಾಖಲೆಗಳನ್ನು ಸಲ್ಲಿಸಿ ಮತ್ತು ಶುಲ್ಕವನ್ನು ಭರಿಸಿ ಅರ್ಹತಾ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸುವುದು.**

ಹೆಚ್ಚಿನ ವಿವರಗಳಿಗಾಗಿ ಸಂಬಂಧಿಸಿದ ಸ್ನಾತಕೋತ್ತರ ವಿಭಾಗಗಳನ್ನು ಅಥವಾ ವಿಶ್ವವಿದ್ಯಾಲಯದ ಜಾಲತಾಣ **www.kud.ac.in** ವನ್ನು ಸಂಪರ್ಕಿಸುವುದು.

**8.0 ಶೈಕ್ಷಣಿಕ ವೇಳಾಪಟ್ಟಿ :**

| | | | |
|---|---|---|---|
| 1. | ಪ್ರವೇಶ ಅರ್ಜಿ ಪಡೆಯುವ ದಿನಾಂಕ (ಅಂತರ್ಜಾಲದ ಮುಖಾಂತರ ಡೌನಲೋಡ್ ಮಾಡಿಕೊಳ್ಳುವುದು) | **20.02.2024** | ಮಂಗಳವಾರ |
| 2. | ಪ್ರವೇಶ ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ | **07.03.2024** | ಗುರುವಾರ |
| 3. | ಪ್ರವೇಶ ಪರೀಕ್ಷೆ ದಿನಾಂಕ | **12.04.2024** | ಶುಕ್ರವಾರ |
| 4. | ಅರ್ಹವಿದ್ಯಾರ್ಥಿಗಳ ಯಾದಿ ಪ್ರಕಟಿಸುವುದು | **18.04.2024** | ಗುರುವಾರ |
| 5. | ಸಂದರ್ಶನದ ದಿನಾಂಕ | **24.04.2024** | ಬುಧುವಾರ |
| 6. | ಎಲ್ಲ ನಿಖಾಯಗಳ ಡಾಕ್ಟರಲ್ ಕಮೀಟಿ ದಿನಾಂಕ | **29.04.2024** ದಿಂದ **09.05.2024** | ಸೋಮವಾರ ದಿಂದ ಗುರುವಾರ |
| 7. | **ಪ್ರವೇಶ ಆಯ್ಕೆ ಪಟ್ಟಿಯಲ್ಲಿ ಪ್ರಕಟಗೊಂಡ ದಿನಾಂಕದಿಂದ 07 ಕರ್ತವ್ಯದ ದಿನಗಳೊಳಗಾಗಿ ಪ್ರವೇಶ ಪಡೆಯಬೇಕು.** | | |
| 8. | **07 ಕರ್ತವ್ಯದ ದಿನಗಳೊಳಗಾಗಿ ಪ್ರವೇಶ ಪಡೆಯದ ಸ್ಥಾನಗಳಲ್ಲಿ, ಕಾಯ್ದಿರಿಸಿದ ಪಟ್ಟಿಯಲ್ಲಿರುವ ಅರ್ಹ ವಿದ್ಯಾರ್ಥಿಗಳು 7 ದಿನಗಳೊಳಗಾಗಿ ಶುಲ್ಕ ಭರಿಸಿ ಪ್ರವೇಶ ಪಡೆಯಬೇಕು.** | | |

**ಒಂದು ವೇಳೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ ರಜಾ ದಿನವಾದಲ್ಲಿ ಕೆಲಸದ ಮರುದಿನವನ್ನು ಕೊನೆಯ ದಿನಾಂಕವೆಂದು ಪರಿಗಣಿಸುವುದು.**

ಅರ್ಜಿದಾರರು ತಮ್ಮ ಆಯ್ಕೆಯ ವಿಷಯದಲ್ಲಿ ಸ್ವತಃ ಸಂಬಂಧಪಟ್ಟ ವಿಭಾಗಗಳಲ್ಲಿ ವಿಚಾರಿಸತಕ್ಕದ್ದು. ಆಯ್ಕೆಯ ವಿವರಗಳನ್ನು ಕ.ವಿ.ವಿಯ ಜಾಲತಾಣದಲ್ಲಿ ಪ್ರಕಟಿಸಲಾಗುವುದು. ಈ ಕುರಿತು ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

**ಸೂಚನೆ : ಪಿಎಚ್.ಡಿ ಕೋರ್ಸಿನ ಆಯ್ಕೆಯು ಫೆಲೋಶಿಫ್/ಶಿಷ್ಯವೇತನದ ಗ್ಯಾರಂಟಿಯನ್ನು ನೀಡುವುದಿಲ್ಲ. ಫೆಲೋಶಿಫ್ ಅಥವಾ ಶಿಷ್ಯವೇತನ ನೀಡುವಿಕೆಯು ಅನುದಾನ ಮತ್ತು ಯೋಜನೆಗಳ ಲಭ್ಯತೆ ಹಾಗೂ ವಿಶ್ವವಿದ್ಯಾಲಯದ ಇನ್ನಿತರ ನಿಯಮಗಳಿಗೆ ಒಳಪಟ್ಟಿರುತ್ತದೆ.**

A. Kannappa

**ಕುಲಸಚಿವರು**

ಪ್ರತಿ ಮಾಹಿತಿಗಾಗಿ:

1. ಎಲ್ಲ ನಿಖಾಯಗಳ ಡೀನರು/ಎಲ್ಲ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರು, ಕ.ವಿ.ವಿ ಧಾರವಾಡ./ಎಲ್ಲ ಸ್ನಾತಕೋತ್ತರ ಕೇಂದ್ರಗಳ ಆಡಳಿತಗಾರರು.
2. ಕುಲಸಚಿವರು (ಮೌಲ್ಯ ಮಾಪನ), ಕ.ವಿ.ವಿ ಧಾರವಾಡ.
3. ಹಣಕಾಸು ಅಧಿಕಾರಿಗಳು, ಕ.ವಿ.ವಿ ಧಾರವಾಡ.
4. ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ವಿಭಾಗ, ಕ.ವಿ.ವಿ ಧಾರವಾಡ.
5. ಗ್ರಂಥಪಾಲಕರು, ಮುಖ್ಯ ಗ್ರಂಥಾಲಯ, ಕ.ವಿ.ವಿ ಧಾರವಾಡ.
6. ಮುಖ್ಯಸ್ಥರು, ಯು.ಇ.ಆಯ್.ಜಿ.ಬಿ, ಕ.ವಿ.ವಿ ಧಾರವಾಡ.
7. ನಿರ್ದೇಶಕರು, ಪ್ರಸಾರಾಂಗ, ಕ.ವಿ.ವಿ ಧಾರವಾಡ.